ನೆಲೆಯೂರಿಸಿದ್ದ, ಅಸಂಖ್ಯ ಅನುಯಾಯಿಗಳನ್ನು ಸಿದ್ಧಪಡಿಸಿದ್ದ, ನಾಡಿಗೆ ಹೊಸ ದಿಕ್ಕು ತೋರಿಸಿದ್ದ ನಿಸ್ವಾರ್ಥ ನೇತಾರನೊಬ್ಬ ಅಸ್ತಮಿಸಿದ್ದ (1972ರ ಜೂನ್ 9). ಐವತ್ತು ತುಂಬುವ ಮುನ್ನವೇ ಗೌಡರು ನಿರ್ಗಮಿಸಿದ್ದು ಕರ್ನಾಟಕ ಕಂಡ ದೊಡ್ಡ ರಾಜಕೀಯ, ಸಾಂಸ್ಕೃತಿಕ ದುರಂತ.

***

ಇದಾದ ಕೆಲ ಕಾಲದ ನಂತರ ಯು.ಆರ್. ಅನಂತಮೂರ್ತಿ ಅವರು ಬರೆದ ಕಾದಂಬರಿ 'ಅವಸ್ಥೆ' ನಮ್ಮ ಸಮಾಜವಾದಿ ಮಿತ್ರರನ್ನು ಬಹಳ ಕಾಡಿತು. ಅನಂತಮೂರ್ತಿ ಅದರ ಚಿತ್ರೀಕರಣದ ವ್ಯವಸ್ಥೆ ಮಾಡಿಕೊಂಡ ನಂತರ ಸೋನಕ್ಕ ಬಹಳ ಕಳವಳಗೊಂಡಿದ್ದರು. ಆ ಬಗ್ಗೆ ಗೌಡರ ಅನೇಕ ಮಿತ್ರರೊಡನೆ ಚರ್ಚಿಸಿದ್ದರು. ನಮ್ಮ ಮನೆಗೂ (1987ರ ಡಿಸೆಂಬರ್ 2) ಬಂದಿದ್ದರು. ವಿಷಯ ನ್ಯಾಯಾಲಯದ ಕಟ್ಟೆಯನ್ನೂ ಏರಿತ್ತು. ಆಗ ಸಹ ಮಹತ್ವದ ಪಾತ್ರ ವಹಿಸಿದ್ದವರು ಡಾ. ವಿಷ್ಣುಮೂರ್ತಿ. ಏನೇನೋ ಆಗಿ, ಕೊನೆಗೂ 'ಅವಸ್ಥೆ'ಯನ್ನು ಚಿತ್ರೀಕರಿಸಲಾಗಿತ್ತು. ಧಾರವಾಡದಲ್ಲಿಯೂ ನಾವು 'ಅವಸ್ಥೆ'ಯ ಅವಸ್ಥೆಯನ್ನು ನೋಡಬೇಕಾಯಿತು (1989ರ ಆಗಸ್ಟ್ 23).

7

ವಿಷ್ಣುಮೂರ್ತಿಯವರು ಗೋಪಾಲಗೌಡರ ಡೈರಿ, ಪತ್ರ ಫೋಟೊ ಇತ್ಯಾದಿ ಕಾಪಾಡಿಕೊಂಡಿದ್ದಾರೆ. ಮೈಸೂರಲ್ಲಿ ಸ್ವಂತದ ಮುದ್ರಣಾಲಯವನ್ನೂ ಹಾಕಿಕೊಂಡಿದ್ದ ವಿಷ್ಣುಮೂರ್ತಿಯವರು ತಮ್ಮ ಅನೇಕ ಪುಸ್ತಕಗಳನ್ನು ಅಲ್ಲಿಂದಲೇ ಅಚ್ಚು ಮಾಡುತ್ತಿದ್ದರು. ಒಂದು ಬೆಳಗಿನ ಪತ್ರಿಕೆ, ಒಂದು ಸಂಜೆ ಪತ್ರಿಕೆಯನ್ನೂ ಪ್ರಕಟಿಸುತ್ತಿದ್ದರು. ವಿಷ್ಣುಮೂರ್ತಿ ಅವರ ಮನೆಯ ಔಟ್‌ಹೌಸ್‌ನಲ್ಲಿಯೇ ಹೇಮಾ ಇರುತ್ತಿದ್ದಳು. ಅಂಥ ಹಲವು ಸಂದರ್ಭಗಳಲ್ಲಿಯೇ ನಾನು ಸೋನಕ್ಕನನ್ನು ಅಲ್ಲಿ ಕಂಡು ಮಾತಾಡಿದ್ದೆ. ಹೇಮಾಳ ನೆರವಿನಿಂದ, 'ಅನನ್ಯ ಪ್ರಕಾಶನ'ದಿಂದ, ಗೋಪಾಲಗೌಡರ ಬಗ್ಗೆ ಮಹತ್ವದ ಕೃತಿಗಳನ್ನು ಮೂರ್ತಿ ರಚಿಸಿದ್ದಾರೆ. ಈ ಕೆಳಗಿನ ಮೂರೂ ಕೃತಿಗಳನ್ನು ಹೇಮಾ ಪ್ರಕಟಿಸಿದ್ದಾಳೆ:

1. **ಗೋಪಾಲಗೌಡ ಶಾಂತವೇರಿ: ನೆನಪುಗಳು;** ಡಾ. ಎಚ್.ಸಿ. ವಿಷ್ಣುಮೂರ್ತಿ, ಮೇ 1982, ಪುಟ: 124, ಅನನ್ಯ ಪ್ರಕಾಶನ, ನಜರದಾದ್, ಮೈಸೂರು.

2. **ಗೋಪಾಲಗೌಡರ ಡೈರಿ, ಪತ್ರಗಳು ಇತ್ಯಾದಿ:** ಭಾಗ–1; ಡಾ. ಎಚ್.ಸಿ. ವಿಷ್ಣುಮೂರ್ತಿ, ಜೂನ್ 1982, ಪುಟ: 108, ಅನನ್ಯ ಪ್ರಕಾಶನ, ಮೈಸೂರು.

3. **ಗೋಪಾಲಗೌಡ ಶಾಂತವೇರಿ: ಅಂತರಂಗ–ಬಹಿರಂಗ;** ಸಂ. ಡಾ. ಎಚ್.ಸಿ. ವಿಷ್ಣುಮೂರ್ತಿ, ಆಗಸ್ಟ್ 1999, ಪುಟ: 614, ಅನನ್ಯ ಪ್ರಕಾಶನ, ಧಾರವಾಡ.



ದಾಂಪತ್ಯದ ಅನುಬಂಧಕ್ಕೆ ಒಳಗಾದ ಹೊಸತರಲ್ಲಿ ಶಾಂತವೇರಿ ಗೋಪಾಲಗೌಡರು ಹಾಗೂ ಸೋನಕ್ಕ

ಈ ಮೂರನೆಯ ಪುಸ್ತಕ, ಮೊದಲಿನ ಎರಡೂ ಪುಸ್ತಕ ಮತ್ತು ಉಳಿದೆಲ್ಲ ಸಾಮಗ್ರಿ ಸಮೇತ ಗೋಪಾಲಗೌಡರ ಸಮಗ್ರ ಜೀವನವನ್ನೇ ಪ್ರತಿನಿಧಿಸುವಂಥ ಕೃತಿಯಾಗಿದೆ.

ಮೊದಲಿನ ಎರಡು ಪುಸ್ತಕಗಳ ಹಸ್ತಪ್ರತಿಯನ್ನು ಮೈಸೂರಲ್ಲಿ ವಿಷ್ಣುಮೂರ್ತಿಯೊಂದಿಗೆ 1982ರಲ್ಲಿಯೇ ಓದಿದ್ದೆ. ನೆನಪು ಮತ್ತು ಡೈರಿ ಭಾಗಗಳನ್ನು ಬೇರೆಯಾಗಿಯೇ ಪ್ರಕಟಿಸಲು